ಬಿಡುಗಡೆಯಾಗಿರುವುದು ಹಾಗೆ ವಿಧಾನಸಭಾ ಕ್ಷೇತ್ರವಾರು ಲೋಕೋಪಯೋಗಿ ಇಲಾಖೆಯಲ್ಲಿ ಹಣ ಬಿಡುಗಡೆ ಮಾಡಲು ಇರುವ ತೊಂದರೆಗಳೇನು?

ಶ್ರೀ ಶಿವಾನಂದ ಪೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತಾರತಮ್ಯವಾಗಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳು ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳಾಗಿದ್ದು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗುವುದಿಲ್ಲ. ಅಲ್ಲದೆ ಜಿಲ್ಲಾ ಮಟ್ಟದ ಆಡಳಿತಾತ್ಮಕ ಕಟ್ಟಡಗಳ ಹಾಗೂ ವಸತಿ ಗೃಹಗಳ ನಿರ್ಮಾಣವೂ ಕೂಡ ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತವಾಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಮಾದರಿಯಲ್ಲಿ ಹಣ ಬಿಡುಗಡೆ ಕಾರ್ಯ ಸಾಧ್ಯವಿಲ್ಲ.

ಇಂಡಿ ಮತ ಕ್ಷೇತ್ರದಲ್ಲಿ ವಿದ್ಯುತ್ ಯೋಜನೆ

531 - ಶ್ರೀ ರವಿಕಾಂತ ಎಸ್. ಪಾಟೀಲ್ (ಇಂಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ಮತ ಕ್ಷೇತ್ರದಲ್ಲಿ ಹೊಸ ಸರ್ಕಾರ ರಚನೆಯಾದ ಮೇಲೆ ಹೊಟ್ಟಿರುವ ಭಾಗ್ಯಜ್ಯೋತಿಗಳೆಷ್ಟು?

ಆ) ಇಂಡಿ ಮತ ಕ್ಷೇತ್ರದ 2 ತಾಲ್ಲೂಕುಗಳನ್ನೊಳಗೊಂಡ (ಇಂಡಿ ಮತ್ತು ಸಿಂದಗಿ) ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, 2 ತಾಲ್ಲೂಕುಗಳನ್ನೊಳಗೊಂಡ ಈ ಮತ ಕ್ಷೇತ್ರಕ್ಕೆ ಕನಿಷ್ಟ 2000 ಭಾಗ್ಯಜ್ಯೋತಿಗಳನ್ನು ಒದಗಿಸಲು ಸರ್ಕಾರ ಶ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರಸಕ್ತ ವರ್ಷವಾದ 1995-96ರಲ್ಲಿ ಇಂಡಿ ಮತ ಕ್ಷೇತ್ರದಲ್ಲಿ ಭಾಗ್ಯಜ್ಯೋತಿ ಯೋಜನೆಯಡಿ 1000 ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಗುರಿ ನಿಗದಿಪಡಿಸಿದೆ.

ಆ) ಹೌದು

ಇ) ಪ್ರತೀ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಕ್ಕೆ 1000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲಾಗುತ್ತದೆ ಇದರ ಪ್ರಕಾರ ಇಂಡಿ ಮತ ಕ್ಷೇತ್ರ ಮತ್ತು ಸಿಂದಗಿ ಮತ ಕ್ಷೇತ್ರಗಳಿಗೆ ತಲಾ 1000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲಾಗುವುದು ಇಂಡಿ ಮತ ಕ್ಷೇತ್ರಕ್ಕೆ 2000 ಭಾಗ್ಯಜ್ಯೋತಿ ಸಂಪರ್ಕಗಳನ್ನು ನೀಡಲು ಸಾಧ್ಯವಿಲ್ಲ.

ಬಿನ್ನಿಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ವಿದ್ಯುತ್ ಅಭಾವ

2519 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ನಿಲುಗಡೆ ಪ್ರತಿದಿನ ಎಷ್ಟು ಗಂಟೆಗಳಕಾಲ ಆಗುತ್ತಿರುತ್ತದೆ?

ಆ) ಈ ಕ್ಷೇತ್ರದಲ್ಲಿ ಹಲವಾರು ಭಾಗಗಳಲ್ಲಿ ಪ್ರತಿ ದಿವಸ ಹಲವಾರು ಗಂಟೆಗಳ ಕಾಲ ವಿದ್ಯುತ್ ಸಂಪರ್ಕವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಈ) ಈ ಕ್ಷೇತ್ರದಲ್ಲಿ ಹೊಸದಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಉ) ಹಾಗಿದ್ದಲ್ಲಿ ಎಷ್ಟು ಟ್ರಾನ್ಸ್ ಫಾರ್ಮರ್‌ಗಳನ್ನು ಹೊಸದಾಗಿ ಈ ಕ್ಷೇತ್ರದಲ್ಲಿ 1995-96ರಲ್ಲಿ ಅಳವಡಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಬೆಳಗಿನ ಮತ್ತು ಸಂಜೆಯ ಪೀಕ್‌ರೋಡ್ ಸಮಯಗಳಲ್ಲಿ 45 ನಿಮಿಷಗಳ ಅವಧಿಯ ನಿಯಮಿತ ಲೋಡ್ ಶೆಡ್ಡಿಂಗನ್ನು ಬೆಸ್ಕಾಂ ವಿಧಾನ ಸಭಾ ಕ್ಷೇತ್ರದಲ್ಲಿ ನಿರ್ವಹಿಸಲಾಗುತ್ತಿದೆ.

ಆ) ಮತ್ತು ಇ) ಈ ಕ್ಷೇತ್ರದಲ್ಲಿ ಪ್ರತಿ ದಿವಸ ದೀರ್ಘಕಾಲದ ವಿದ್ಯುತ್ ಅಡಚಣೆ ಉಂಟಾಗುತ್ತಿಲ್ಲ. ಕೆಲವೊಮ್ಮೆ ವಿದ್ಯುತ್ ಉಪಕರಣಗಳಲ್ಲಿ ಉಂಟಾಗುವ ದೋಷ, ಕೇಬಲ್‌ಮತ್ತು ವಿದ್ಯುತ್ ಲೈನುಗಳಲ್ಲಿ ಉಂಟಾಗುವ ದೋಷ ಇತ್ಯಾದಿ ಕಾರಣಗಳಿಂದ ವಿದ್ಯುತ್ ಸರಬರಾಜಿನಲ್ಲಿ ಅನಿವಾರ್ಯವಾಗಿ ಅಡಚಣೆ ಉಂಟಾಗುತ್ತದೆ. ಅಡಚಣೆ ಜಾಗ್ರತೆ ವಿದ್ಯುತ್ ಸರಬರಾಜನ್ನು ಪುನರ್ ವ್ಯವಸ್ಥೆಗೊಳಿಸಲು ಎಲ್ಲಾ ಆಗತ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ಈ) ಹೌದು.

ಉ) ಈ ಕ್ಷೇತ್ರದಲ್ಲಿ 1995-96ರಲ್ಲಿ 17ಹೊಸ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಲು ಉದ್ದೇಶಿಸಿದೆ.

ಮಲ್ಪೆ ಅಧಿಸೂಚಿತ ಪ್ರದೇಶದ ಮೀನುಗಾರಿಕಾ ಇಲಾಖೆಯ ಜಾಗ ಗುತ್ತಿಗೆ ನೀಡುವ ಬಗ್ಗೆ

1880 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲ್ಪೆ ಮೀನುಲಾರಿಕೆ ಬಂದರಿನ ಸರಹದ್ದಿನಲ್ಲಿರುವ ಮಲ್ಪೆ ಅಧಿಸೂಚಿತ ಪ್ರದೇಶದೊಳಗಿನ, ಮೀನುಗಾರಿಕಾ ಇಲಾಖೆಯ ಅಧೀನದಲ್ಲಿ ಇರತಕ್ಕ ಭೂಮಿ ಎಷ್ಟು?

ಆ) ಕಳೆದ ಐದು ವರ್ಷಗಳಿಂದ ಈ ಭೂಮಿಯನ್ನು ದೀರ್ಘ ಕಾಲಾವಧಿ ಗುತ್ತಿಗೆಗೆ ಎಷ್ಟು ಜನರಿಗೆ ಕೊಡಲಾಗಿದೆ?

ಇ) ಹಾಗಿದ್ದಲ್ಲಿ, ಯಾವ ಉದ್ದೇಶಕ್ಕಾಗಿ ಕೊಡಲಾಗಿದೆ, ಎಷ್ಟು ವರ್ಷದಿಂದ ಕೊಡಲಾಗಿದೆ, ಎಷ್ಟು ಎಕರೆ ಭೂಮಿ ಕೊಡಲಾಗಿದೆ?

ಈ) ಕಳೆದ 5 ವರ್ಷಗಳಲ್ಲಿ ದೀರ್ಘ ಕಾಲಾವಧಿ ಗುತ್ತಿಗೆಗಳನ್ನು ಎಷ್ಟು ಸಲ ಮರು ಪರಿಶೀಲನೆ ಮಾಡಲಾಗಿದೆ. ಈ ಬಗ್ಗೆ ನಿಗಧಿಪಡಿಸಲಾದ ಗುತ್ತಿಗೆ ದರ ಎಷ್ಟು?

ಉ) ನಿಗಧಿತ ದೀರ್ಘ ಕಾಲಾವಧಿ ಗುತ್ತಿಗೆ ಮುಗಿದ ಮೇಲೆ ಪುನರ್ ವಿಮರ್ಶಿಸಿದ ದರದಲ್ಲಿ ಮತ್ತು ಎಷ್ಟು ಜನ ಸರ್ಕಾರದ ಮಂಜೂರಾತಿ ಪಡೆದಿದ್ದಾರೆ, ಪಡೆದಿದ್ದಲ್ಲಿ ಯಾವ ವರ್ಷದಲ್ಲಿ ಪಡೆಯಲಾಗಿದೆ?

ಊ) ಗುತ್ತಿಗೆದಾರರಿಂದ ಮೀನುಗಾರಿಕೆ ಇಲಾಖೆಗೆ ಬರಬೇಕಾದ ಹಣ ಎಷ್ಟು (ವಿವರ ನೀಡುವುದು)?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :